# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕೋರಮಂಗಲ ಉಪ-ವಿಭಾಗದ ಜಕ್ಕಸಂದ್ರ ವಾರ್ಡ್ ಸಂಖ್ಯೆ-173 ದಿನಾಂಕ: 10.02.2022 ರಂದು ಫೆಬ್ರವರಿ-2022 ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ ಶಿವಣ್ಣ .ಟಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173ರ ರವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಕಟ್ಟಡ, ಉದ್ಯಾನವನ ಹತ್ತಿರ, ಹೆಚ್.ಎಸ್.ಆರ್. 5ನೇ ಸೆಕ್ಟರ್, ಜಕ್ಕಸಂದ್ರ, (ಜಕ್ಕಸಂದ್ರ ವಾರ್ಡ್ ಕಛೇರಿ, ಬಿ.ಬಿ.ಎಂ.ಪಿ) ಬೆಂಗಳೂರು ದಿನಾಂಕ: 10.02.2022 ರಂದು ಬೆಳಗ್ಗೆ 11.30 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದವರು:-**

1. ಶ್ರೀ ಎಂ.ಎ. ಪೊನ್ನಪ್ಪ
2. ಶ್ರೀಮತಿ ಜ್ಯೋತಿ ಪ್ರಭು
3. ಶ್ರೀಮತಿ ಸರಸ್ವತಮ್ಮ
4. ಶ್ರೀಮತಿ ಪ್ರೇಮ
5. ಶ್ರೀ ಶ್ರೀನಿವಾಸ ಹೊಳ್ಳ
6. ಶ್ರೀ ಸುಭಾಷ್
7. ಶ್ರೀ ಮೋಹನ್
8. ಶ್ರೀ ಸಜೀ ಜಾರ್ಜ್

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-173 ಜಕ್ಕಸಂದ್ರ
2. ಶ್ರೀ ಅರವಿಂದ .ಆರ್, ಕಿರಿಯ ಆರೋಗ್ಯ ಪರಿವೀಕ್ಷಕರು
3. ಶ್ರೀ ಸಯ್ಯದ್ ಎಂ. ಹುಲಿಕೊಪ್ಪ, ಹೆಚ್.ಎಸ್.ಆರ್. ಟ್ರಾಫಿಕ್ ಪೊಲೀಸ್ ಸ್ಟೇಷನ್
4. ಶ್ರೀ ಜಯರಾಮ ನಾಯಕ್, ಕಿರಿಯ ಅಭಿಯಂತರರು, ಬೆಸ್ಕಾಂ
5. ಶ್ರೀ ಸಂಜೀವಕುಮಾರ್, ಬಿ.ಬಿ.ಎಂ.ಪಿ. ಸೂಪರ್‌ವೈಸರ್
6. ಶ್ರೀಮತಿ ಮುತ್ತವ್ವ, ಮಡಿವಾಳ ಪೊಲೀಸ್ ಸ್ಟೇಷನ್

* * * * *

ಶ್ರೀ ಶಿವಣ್ಣ ಟಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ಶ್ರೀ ಪೊನ್ನಪ್ಪ ರವರು ಮಾತನಾಡಿ, ಸ್ಮಶಾನದ ಮುಂಭಾಗವಿರುವ 14ನೇ ಮುಖ್ಯರಸ್ತೆಯಲ್ಲಿ ಇರುವ ರಸ್ತೆ ವಿಭಜಕವನ್ನು 6ನೇ ಅಡ್ಡರಸ್ತೆ (ಸ್ಮಶಾನದ) ರಸ್ತೆಗೆ ಸಂಪರ್ಕ ಕಲ್ಪಿಸಲು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ರಸ್ತೆ ಮೂಲಭೂತ ಸೌಕರ್ಯ**



Scanned by CamScanner

ಸ್ಮಶಾನದ ಮುಂಭಾಗದ ರಸ್ತೆಯಲ್ಲಿ ಪಾರ್ಕಿಂಗ್ ಮಾಡಿರುವ ವಾಹನಗಳನ್ನು ತೆರವುಗೊಳಿಸುವಂತೆ ಕ್ರಮ ಕೈಗೊಳ್ಳುವಂತೆ ಮಡಿವಾಳ ಪೊಲೀಸ್ ಠಾಣೆಯ ಪೊಲೀಸ್ ರವರಿಗೆ ಸಭೆಯಲ್ಲಿ ತಿಳಿಸಲಾಯಿತು.

ಕ್ರಮ: ಆರಕ್ಷಕ ನಿರೀಕ್ಷಕರು
ಸಂಚಾರ ಪೊಲೀಸ್ ಠಾಣೆ, ಮಡಿವಾಳ

ಶ್ರೀ ಪೊನ್ನಪ್ಪ ರವರು ಮಾತನಾಡಿ, ವಾರ್ಡ್‌ನಲ್ಲಿನ ಬ್ಲಾಕ್‌ಸ್ಪಾಟ್‌ಗಳ ಮಾಹಿತಿ ಹಾಗೂ ತೆರವು ಕಾರ್ಯಾಚರಣೆ ಕೈಗೊಂಡಿರುವ ಮಾಹಿತಿಯ ವಿವರವನ್ನು ನೀಡುವಂತೆ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಶ್ರೀ ಅರವಿಂದ್, ಕಿರಿಯ ಆರೋಗ್ಯ ನಿರೀಕ್ಷಕರು ರವರು ಮಾತನಾಡಿ, 14ನೇ ಮುಖ್ಯರಸ್ತೆ, ಸ್ಮಶಾನದ ಹತ್ತಿರ, 6ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆಯಲ್ಲಿದ್ದ ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಘನತ್ಯಾಜ್ಯ ನಿರ್ವಹಣಾ ವಿಭಾಗ, ಬಿ.ಟಿ.ಎಂ. ಲೇಔಟ್

ಶ್ರೀ ಸಜೀ ಜಾರ್ಜ್ ಮತ್ತು ಶ್ರೀ ಸುಭಾಷ್ ರವರು ಮಾತನಾಡಿ, ಜಕ್ಕಸಂದ್ರ 1ನೇ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಹಾಗೂ ಟೀಚರ್ಸ್ ಕಾಲೋನಿಯಲ್ಲಿ ಪಿಕ್‌ಪಾಕೆಟ್ ಜಾಸ್ತಿಯಾಗಿದ್ದು, ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

ಕ್ರಮ: ಆರಕ್ಷಕ ನಿರೀಕ್ಷಕರು
ಮಡಿವಾಳ ಪೊಲೀಸ್ ಠಾಣೆ

ಶ್ರೀಮತಿ ಸರಸ್ವತಮ್ಮ ರವರು ಮಾತನಾಡಿ, 10ನೇ ಅಡ್ಡರಸ್ತೆ, ವೆಂಕಟಾಪುರ ರಸ್ತೆಯಲ್ಲಿ ಹಾಳಾಗಿರುವ ಕಾಬಲ್ ಸ್ಟೋನ್‌ಗಳನ್ನು ಸರಿಪಡಿಸಬೇಕೆಂದು ಸಭೆಯಲ್ಲಿ ಕೋರಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೋರಮಂಗಲ ಉಪವಿಭಾಗ

ಶ್ರೀ ಹೊಳ್ಳ ರವರು ಮಾತನಾಡಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಕಾಮಗಾರಿ ವೇಳೆಯಲ್ಲಿ ರಸ್ತೆಗೆ ನೀರು ಹಾಯಿಸಿ, ಧೂಳು ಬರದಂತೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಬಿ.ಡಬ್ಲ್ಯೂ.ಎಸ್.ಎಸ್.ಬಿ.

ಶ್ರೀಮತಿ ಜ್ಯೋತಿ ರವರು ಮಾತನಾಡಿ, ಹೆಚ್.ಎಸ್.ಆರ್. 5ನೇ ಬಡಾವಣೆಯ 1) 4ನೇ 'ಬಿ' ಅಡ್ಡರಸ್ತೆ, ನಂ.169 2) ನಂ.173, 12ನೇ ಮುಖ್ಯರಸ್ತೆ 3) 7ನೇ ಅಡ್ಡರಸ್ತೆ, ಕೆ.ಇ.ಬಿ. ಕಛೇರಿ ಮುಂಭಾಗ 4) 13ನೇ ಮುಖ್ಯರಸ್ತೆ ಗ್ರೀನ್ ವ್ಯೂಹ್ ಆಸ್ಪತ್ರೆ ಹಿಂಭಾಗ ಇಲ್ಲಿ ರಸ್ತೆ ದೀಪಗಳು ಹದಗೆಟ್ಟಿದ್ದು, ರಸ್ತೆ ದೀಪಗಳನ್ನು ಸರಿಪಡಿಸುವಂತೆ ಸಭೆಯಲ್ಲಿ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ರಸ್ತೆ ದೀಪಗಳು (ವಿದ್ಯುತ್), ಬಿ.ಬಿ.ಎಂ.ಪಿ.



Scanned by CamScanner

ಶ್ರೀಮತಿ ಜ್ಯೋತಿ ರವರು ಮಾತನಾಡಿ, 10ನೇ ಅಡ್ಡರಸ್ತೆಯಲ್ಲಿರುವ ಬೋರ್‌ವೆಲ್ ಹದಗೆಟ್ಟಿದ್ದು, ಇದನ್ನು ಸರಿಪಡಿಸುವಂತೆ ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ಕೋರಮಂಗಲ ಉಪವಿಭಾಗ**

ಶ್ರೀಮತಿ ಜ್ಯೋತಿ ರವರು ಮಾತನಾಡಿ, 11ನೇ ಮುಖ್ಯರಸ್ತೆಯ ಹೆಚ್.ಎಸ್.ಆರ್. 5ನೇ ಬಡಾವಣೆಯಲ್ಲಿ ಚರಂಡಿ ಹೂಳು ತೆಗೆಯುವ ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸಲು ಸಭೆಯಲ್ಲಿ ಚರ್ಚಿಸಲಾಯಿತು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ಕೋರಮಂಗಲ ಉಪವಿಭಾಗ**

ಶ್ರೀ ಮೋಹನ್ ರವರು ಈ ಕೆಳಕಂಡ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿದರು.

- ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮತ್ತು ಬೆಸ್ಕಾಂ ಹಾಗೂ ಘನತ್ಯಾಜ್ಯ ಇಲಾಖೆಯ ಬಗೆಗಿನ ಕಾರ್ಯವೈಖರಿ ಬಗ್ಗೆ ತಿಳಿಸಿ, ಇಲಾಖೆಯ ಕಾರ್ಯವೈಖರಿಯ ಬಗ್ಗೆ ಪ್ರಸಂಸಿದರು.
- ಟೀಚರ್ಸ್ ಕಾಲೋನಿಯಲ್ಲಿ ಪ್ಲಾಸ್ಟಿಕ್ ಬ್ಯಾಗ್‌ಗಳನ್ನು ಸಾರ್ವಜನಿಕರು ಉಪಯೋಗಿಸುತ್ತಿರುವುದು ಕಂಡು ಬಂದಿದ್ದು, ಇದರ ಬಗ್ಗೆ ಘನತ್ಯಾಜ್ಯ ಇಲಾಖೆಯವರು ಕ್ರಮವಹಿಸಬೇಕೆಂದು ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ಘನತ್ಯಾಜ್ಯ ನಿರ್ವಹಣಾ ವಿಭಾಗ, ಬಿ.ಟಿ.ಎಂ. ಲೇಔಟ್**

- ಸರ್ವೀಸ್ ರಸ್ತೆಯಲ್ಲಿ ಸೈಕಲ್ ಪಾದಚಾರಿ ಇದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಇದನ್ನು ತೆರವುಗೊಳಿಸುವಂತೆ ಮಡಿವಾಳ ಸಂಚಾರ ಪೊಲೀಸ್ ರವರಿಗೆ ತಿಳಿಸಿದರು.
- ಕಾರ್ ಮ್ಯಾಕ್ಸ್ ಷೋರೂಮ್ ರವರು ಫುಟ್‌ಪಾತ್ ಮೇಲೆ ಕಾರುಗಳನ್ನು ನಿಲ್ಲಿಸುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಷೋರೂಮ್‌ನ ಮಾಲೀಕರಿಗೆ ಪಾದಚಾರಿ ಮಾರ್ಗದಲ್ಲಿ ನಿಲ್ಲಿಸದಂತೆ ಹಾಗೂ ತೆರವುಗೊಳಿಸಲು ಸೂಚನೆ ನೀಡುವಂತೆ ಪೊಲೀಸರಿಗೆ ಸಭೆಯಲ್ಲಿ ತಿಳಿಸಿದರು.
- ಸರ್ವೀಸ್ ರಸ್ತೆಯಲ್ಲಿ ಖಾಸಗೀ ಬಸ್‌ಗಳು ನಿಲ್ದಾಣವನ್ನಾಗಿ ಮಾಡಿಕೊಂಡಿರುತ್ತಾರೆ. ಆದುದರಿಂದ ಖಾಸಗೀ ಬಸ್‌ಗಳನ್ನು ನಿಲ್ಲಿಸದಂತೆ ಕ್ರಮವಹಿಸುವಂತೆ ಪೊಲೀಸರಿಗೆ ಸಭೆಯಲ್ಲಿ ತಿಳಿಸಿದರು.

**ಕ್ರಮ: ಆರಕ್ಷಕ ನಿರೀಕ್ಷಕರು**
**ಸಂಚಾರ ಪೊಲೀಸ್ ಠಾಣೆ, ಮಡಿವಾಳ**

- ಸಾರ್ವಜನಿಕರಿಗೆ ಕಳ್ಳತನ, ವಾಹನ ಸಂಚಾರದ ವೇಳೆ ಮೊಬೈಲ್ ಉಪಯೋಗಿಸುವದರಿಂದ ಆಗುವ ಅನಾಹುತಗಳ ಬಗ್ಗೆ ಮುಂತಾದವುಗಳ ಬಗ್ಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ತಿಳಿಸಿದರು.
- ಟೀಚರ್ಸ್ ಕಾಲೋನಿಯಲ್ಲಿ ಪೊಲೀಸರು ಹೆಚ್ಚು ಗಸ್ತು ತಿರುಗುವಂತೆ ಸಭೆಯಲ್ಲಿ ತಿಳಿಸಿದರು.

**ಕ್ರಮ: ಆರಕ್ಷಕ ನಿರೀಕ್ಷಕರು**
**ಮಡಿವಾಳ ಪೊಲೀಸ್ ಠಾಣೆ**

- ಅಪಾಯಕಾರಿ ಕೇಬಲ್‌ಗಳನ್ನು ತೆರವುಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೋರಮಂಗಲ ಉಪವಿಭಾಗ



Scanned by CamScanner

ಶ್ರೀ ಪೊನ್ನಪ್ಪರವರು ಮಾತನಾಡಿ, 4ನೇ ಅಡ್ಡರಸ್ತೆ, ಹೆಚ್.ಎಸ್.ಆರ್. 5ನೇ ಸೆಕ್ಟರ್‌ನಲ್ಲಿರಸ್ತೆಯಲ್ಲಿರುವ ಮಣ್ಣನ್ನು ತೆರವುಗೊಳಿಸುವಂತೆ ತಿಳಿಸಿದರು.

ಕ್ರಮ: ಸಹಾಯಕಕಾರ್ಯಪಾಲಕಅಭಿಯಂತರರು
ಕೋರಮಂಗಲ ಉಪವಿಭಾಗ

ಜಕ್ಕಸಂದ್ರ ವಾರ್ಡ್‌ನಲ್ಲಿ2021-22ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ.60.00 ಲಕ್ಷಗಳ ಅನುದಾನವನ್ನು ನೀಡಲಾಗಿದ್ದು, ರೂ.60.00 ಲಕ್ಷಗಳ ಅನುದಾನದ ಮೊತ್ತಕ್ಕೆ ಈ ಕೆಳಕಂಡಂತೆ ಕಾಮಗಾರಿಯನ್ನು ನಿರ್ವಹಿಸಲು ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಿ ಅನುಮೋದನೆಯನ್ನು ಪಡೆಯಲಾಯಿತು.

| Sl. No | Name of Work | Amount (Rs. in Lakhs) |
|---|---|---|
| 1 | Filling up of Potholes in Ward Jurisdiction in ward no. 173 Jakkasandra | 20.00 |
| 2 | Maintainance of footpath drain and Re-asphalting of damaged roads in ward Jurisdiction in ward No.173 | 20.00 |
| 3 | Annual Maintenance of Borewell & Water supply lines in ward Jurisdiction ward No.173 | 20.00 |

ಕೊನೆಯದಾಗಿ ಮಾನ್ಯನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿಅಧ್ಯಕ್ಷರು ಸಭೆಗೆ ಹಾಜರಾದಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನುಒದಗಿಸಬೇಕೆಂದುಸದಸ್ಯಕಾರ್ಯದರ್ಶಿ ಮತ್ತುಸಭೆಯಲ್ಲಿ ಹಾಜರಾಗಿದ್ದಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಪ್ರದೀಪ್‌ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕಅಭಿಯಂತರರು,
ವಾರ್ಡ್-173ಜಕ್ಕಸಂದ್ರ

(ಶ್ರೀ ಶಿವಣ್ಣ ಟಿ)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿಅಧ್ಯಕ್ಷರು
ವಾರ್ಡ್-173ಜಕ್ಕಸಂದ್ರ

Scanned by CamScanner

ವಾರ್ಡ್ ಸಭೆ = 10/02/2022

## ಹಾಜರಿದ್ದ ಅಧಿಕಾರಿಗಳು

01 Aravinda. R JHI — Aravind. R

2) Syed M. Hdilkoppa H.S.R.[M22] Trafic Police. station

3) Jayarama naik. k (SE) BESCOM

4) Mutt aura WO3 / Madiwala P.S

5) Sanjeev Kumar. BBMP Supervisor.

6) Narasimhalu BBMP Supervisor)

## ಹಾಜರಿದ್ದ ಸದಸ್ಯರುಗಳು

| | |
|---|---|
| Sarvothaman | 9448660567 |
| Prema | 9964782867 |
| Ponnappa | 9886632027 |
| Jyothi G. Prabhu | 7019118207 |
| G.S. HOLLA | 25329074 |
| SUBHASH (NTC) | 9845546164 |
| Mohan (NTC) | 7760852892 |
| SAJI GEORGE | Saji 9845289513 |

Scanned by CamScanner



Scanned by CamScanner




Scanned by CamScanner